ಈ ಕುರುಕ್ಷೇತ್ರದಲ್ಲಿ ತೀರಿಕೊಂಡ ತಮ್ಮ ಗಂಡಂದಿರಿಗಾಗಿ ಪ್ರಲಾಪಿಸುತ್ತಿರುವ ಹೆಂಗಸರಂತೆಯೇ ಅಶ್ವತ್ಥಾಮನ ಪತ್ನಿಯೂ ವಿಧವೆಯಾಗುತ್ತಾಳೆ. ಯಾವುದೇ ಪುರುಷ ಸಾವಿನಿಂದಲೂ, 'ಅಬಲಾ ವೃಂದ ಸಮ ಸುಖ ದುಃಖಿಗಳಲಾ' ಎನ್ನುತ್ತಾಳೆ. ಈ ಯುದ್ಧದಿಂದ ಉಂಟಾದ ಮರಣದ ಮಹಾವ್ಯಥೆ ಸಾಕು ಎಂಬ ಅರ್ಥದಲ್ಲಿ, ಯುದ್ಧವು ದುಃಖ ತರುವುದು ಸತ್ತ ಸೈನಿಕರಿಗಲ್ಲ ಬದುಕಿ ನಿತ್ಯ ಸಾಯುವ ಅವರ ಪತ್ನಿಯರಿಗೆ ಮತ್ತು ಹೆತ್ತವರಿಗೆ ಎಂಬ ನಿಲುವು ಕುಮಾರವ್ಯಾಸನದು. ಯುದ್ಧವೆಂದರೆ ಯಾರ ವಿಜಯೋತ್ಸವವೂ ಅಲ್ಲ, ಅದು ಇದ್ದವರ, ಸತ್ತವರ ನರಕ ಎನ್ನುತ್ತಾನೆ ಪಂಪ. ಈ ಬಗೆಯಲ್ಲಿ ಯುದ್ಧರಂಗದೊಳಗೆ ಆಕ್ರಂದನಗೈಯ್ಯುವ ಸ್ತ್ರೀಯರ ಚಿತ್ರಣದ ಒಂದು ಷಟ್ಪದಿ ಕುಮಾರವ್ಯಾಸನಲ್ಲಿ ಹೀಗಿದೆ:

ಸೂಸಿತಬಲಾ ವೃಂದ ಕೆದರಿದ
ಕೇಶ ಪಾಶವ ತೆಳುವಸಿರ ನಿ
ಟ್ಟಾಸುರದ ಹೊಯ್ಲುಗಳ ಲೋಚನವಾರಿಧಾರೆಗಳ।
ಆಸುರಾಕ್ರಂದನದ ಶೋಕಾ
ವೇಶ ಬಹಳದ ಬಾಲೆಯರು ಪ್ರಾ
ಣೇಶ ಮೈದೋರೆನುತ ಹೊಕ್ಕರಸಿದರು ಕಳನೊಳಗೆ॥

ಕುಮಾರವ್ಯಾಸನ ಈ ಬಗೆಯ ಜೀವಪರ ನಿಲುವುಗಳಷ್ಟೇ ಆತನನ್ನು ಜನಪ್ರಿಯ ಮತ್ತು ಶ್ರೇಷ್ಠ ಕವಿಯನ್ನಾಗಿಸಿಲ್ಲ. ಕವಿ, ಕೃತಿಯ ಉದ್ದಕ್ಕೂ ಬಳಸಿರುವ ಭಾಷೆ ಈಗಾಗಲೇ ಹೇಳಿದಂತೆ ಜನಪದ ಶೈಲಿಯದು. ಅದೊಂದು ರೀತಿಯಲ್ಲಿ ಆಡುಮಾತಿನ ಕಾವ್ಯವೇ! ಈ ಬಗೆಯ ಸಹಜ ಭಾಷೆಯಿಂದಾಗಿ ಕೃತಿಯ ಪಾತ್ರಗಳೆಲ್ಲವೂ ಜೀವತಳೆದು ಓದುಗರ ಎದುರು ನಿಂತು ಮಾತನಾಡಿದಂತೆ ಭಾಸವಾಗುತ್ತದೆ. ಹೀಗಾಗಿಯೇ ಈತ ಅಸಂಖ್ಯಾತ ಓದುಗರ, ಕೇಳುಗರ, ಗಮಕಿಗಳ, ವ್ಯಾಖ್ಯಾನಕಾರರ ಲೋಕಪ್ರಿಯ ಆರಾಧ್ಯ ಕವಿಯಾಗಿರುತ್ತಾನೆ.


## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಇಂಗ್ಲಿಷ್‌ಗೆ ಅನುವಾದಗೊಂಡಿದೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ. ಕುಮಾರವ್ಯಾಸನ ಕುರಿತಾದ ದೀರ್ಘ ಪ್ರಸ್ತಾವನೆ, ಅವನ ಕಾವ್ಯ ಪದ್ಯಸಂಗ್ರಹ ಮತ್ತು 50 ವಿಶೇಷ ಚಿತ್ರಗಳಿರುವ 'ಕುಮಾರವ್ಯಾಸ ಭಾರತ ಕಥಾಸಂಗ್ರಹ' ಕೃತಿಯನ್ನು ಶಿವಮೊಗ್ಗದ ಅಹರ್ನಿಶಿ ಪ್ರಕಾಶನ ಪ್ರಕಟಿಸಲಿದೆ.